## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸೇಶನ ಕೇಸ ನಂಃ 189/2019

ಪಿಡಬ್ಲು : 1 ಸಿಡಬ್ಲು : 1

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ಸುಭಾಸ ಸಂಭಾಜಿ ಜಾಧವ |
| ತಂದೆಯ ಹೆಸರು | : ಶ್ರೀ ಸಂಭಾಜಿ ಜಾಧವ |
| ವಯಸ್ಸು | : 65 ವರ್ಷ |
| ಉದ್ಯೋಗ | : ನಿವೃತ್ತ ಪಿ.ಎಸ್.ಐ |
| ವಾಸ್ತವ್ಯ | : ಚಿಕ್ಕೋಡಿ |
| ದಿನಾಂಕ | : 20-02-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ನಾನು 2013 ರಿಂದ 2019 ರ ವರೆಗೆ ಬಸವೇಶ್ವರ ಚೌಕ ಪೋಲೀಸ ಠಾಣೆ ನಿಪ್ಪಾಣಿಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 01.04.2019 ರಂದು ನಾನು ಆ ದಿನ ಮುಂಜಾನೆ 8.15 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾಃ10 ಅಜಿತ ಗೌರಿಶಂಕರ ಪೋಳರವರು ಠಾಣೆಗೆ ಹಾಜರಾಗಿ ತನ್ನ ಅಣ್ಣ ಅರವಿಂದ ಗೌರಿಶಂಕರ ಪೋಳ ಇತನು ದಿಃ 31.03.2019 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಸತೀಶ ಶಾಹಜಿ ಕ್ಷೀರಸಾಗರ ಇತನು ನನ್ನ ಅಣ್ಣನಿಗೆ ಪೋನ ಮಾಡಿದ್ದು ಆತನು ಹೋಗಿ ಬರುತ್ತೇನೆ ಅಂತಾ ಮನೇಲಿ ಹೇಳಿ ಮೋಟರಸೈಕಲ ತೆಗೆದುಕೊಂಡು ಹೋದಾತ ಈ ದಿವಸ ಬೆಳಗಿನವರೆಗೆ ಇನ್ನೂ ನನ್ನ ಅಣ್ಣ ಮನೆಗೆ ಬಂದಿರುವುದಿಲ್ಲ ಆತ ಕಾಣೆಯಾಗಿದ್ದು ಆತನನ್ನು ಹುಡುಕಿ ಕೊಡಿ ಅಂತಾ ದೂರು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 14/2019 ಮನುಷ್ಯ ಕಾಣೆ ಅಂತಾ ದೂರನ್ನು ದಾಖಲಿಸಿಕೊಂಡು ಮಾನ್ಯ ಎಸ್.ಪಿ ಬೆಳಗಾವಿ ಇವರಿಗೆ ಕಾಣೆಯಾದ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ಚಾಸಾಃ 27 ರವರ

ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿದ್ದ ಚಾಸಾಃ10 ರವರು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿಃ1 ಎಂದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿಃ1ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು.

2. ನಾನು ಮನುಷ್ಯ ಕಾಣೆಯಾದ ಪ್ರಕರಣದಲ್ಲಿ ತನಿಖೆಯನ್ನು ಮುಂದುವರೆಸಿ ಸತೀಶ ಶಾಹಜಿ ಕ್ಷೀರಸಾಗರ ಸಾಃ ಬಿರೋಬಾಮಾಳ ಇವರನ್ನು ಸಿಬ್ಬಂದಿ ಮುಖಾಂತರ ಠಾಣೆಗೆ ಹಾಜರುಪಡಿಸಿಕೊಂಡು ವಿಚಾರಣೆ ಮಾಡಿದಾಗ ತಾನು ಮತ್ತು ಸೌರಬ ಅಜಿತ ಅಥಣಿ ಜಾತಿಃ ಲಿಂಗಾಯತ, ಸಾಃ ಶಿವಾಜಿ ನಗರ, ನಿಪ್ಪಾಣಿ ಮತ್ತು ರವಿ ಈರಣ್ಣ ಶಿರಗಾವಿ, ಜಾತಿಃಲಿಂಗಾಯತ, ಸಾಃ ಹಣಬರ ಗಲ್ಲಿ, ನಿಪ್ಪಾಣಿ ತಾವು ಮೂರು ಜನ ಮಿತ್ರರಿದ್ದು ಅರವಿಂದ ಗೌರಿಶಂಕರ ಪೋಳ ಇವನ ಹತ್ತಿರ ಬಂಗಾರ ಮತ್ತು ಹಣ ಇದ್ದು ಪಡೆದುಕೊಳ್ಳೋಣ ಅಂತಾ ತಿಳಿದು ಆತನನ್ನು ಮೂರು ಜನ ಸೇರಿ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡನು ಆದ ಕಾರಣ ನಾನು ಸರ್ಕಾರದ ಪರವಾಗಿ ಮೂರು ಜನರ ವಿರುದ್ಧ ಚಾಸಾಃ 32 ರವರಿಗೆ ದೂರನ್ನು ನೀಡಿರುತ್ತೇನೆ. ಚಾಸಾಃ32 ರವರಿಗೆ ನೀಡಿದ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪಿರ್ಯಾದಿಯಾಗಿದ್ದು, ಅದನ್ನು ನಿಪಿಃ3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ3ಎ ಎಂದು ಗುರುತಿಸಲಾಯಿತು.

3. ಸದರಿ ಪ್ರಕರಣ ದಾಖಲಾದ ನಂತರ ಚಾಸಾಃ 32 ರವರು ಡಿ.ವೈ.ಎಸ್.ಪಿ ಚಿಕ್ಕೋಡಿ ಅವರಿಗೆ ಮಾಹಿತಿ ನೀಡಿದ್ದು ಸದರಿ ಡಿ.ವೈ.ಎಸ್.ಪಿ ಚಿಕ್ಕೋಡಿರವರು ಅಷ್ಟರಲ್ಲಿ ಠಾಣೆಗೆ ಬಂದು ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡು ಈ ಪ್ರಕರಣದ ಆರೋಪಿಯಾದಂತಹ ಸತೀಶ ಶಾಹಜಿ ಕ್ಷೀರಸಾಗರ ಇತನನ್ನು ದಸ್ತಗಿರಿ ಮಾಡಿರುತ್ತಾರೆ.

**ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.